**ಮೇವು ಕಟಾವು:** ಪ್ರತಿ ವರ್ಷ ಅಕ್ಟೋಬರ್, ನವ್ವೆಂಬರ್ ತಿಂಗಳಲ್ಲಿ ಮೇವು ಬೆಳೆ ಬಿತ್ತನೆ ಕೈಗೊಳ್ಳುತ್ತಾರೆ. ಒಂದು ಕೆಜಿ ಕುದುರೆ ಮೆಂತೆ ಬೀಜದ ದರ 600 ರಿಂದ 800 ರೂಪಾಯಿ ಇದ್ದು, ಒಂದು ಎಕರೆಗೆ ಐದು ಕೆಜಿಯಷ್ಟು ಬೀಜ ಬೇಕಾಗುವುದು. ಸಾಲಿನಿಂದ ಸಾಲಿನ ಅಂತರ ಒಂದು ಅಡಿ ನಿರ್ವಹಿಸುವುದು ಸೂಕ್ತ. ಕುದುರೆ ಮೆಂತೆಯನ್ನು ಬಿತ್ತನೆ ಮಾಡಿದ 60 ದಿನಕ್ಕೆ ಮೊದಲ ಕಟಾವು ಮಾಡಬಹುದು. ನಂತರದ ಕಟಾವುಗಳನ್ನು 25 ರಿಂದ 30 ದಿನಕ್ಕೊಮ್ಮೆ ಮಾಡಬಹುದು. ಬೆಳೆಯು 2 ರಿಂದ 3 ಅಡಿವರೆಗೆ ಬೆಳೆಯುತ್ತದೆ. ಮೇವನ್ನು ಒಂದು ವರ್ಷದವರೆಗೆ ಬಹು ಕಟಾವು ಮಾಡಿ ಮುಗಿಸುತ್ತಾರೆ. ಕುದುರೆ ಮೆಂತೆ ಬೆಳೆದ ಕ್ಷೇತ್ರದಲ್ಲಿ ಕಟಾವು ಮಾಡಿದ ನಂತರ ಏಕದಳ ಬೆಳೆಗಳನ್ನು ಬೆಳೆಯುವುದರಿಂದ ಉತ್ತಮ ಇಳುವರಿಯನ್ನು ಪಡೆಯಲು ಸಾಧ್ಯವಿದೆ.

"ಕಸವ ಹೊಡೆವ ಕೈ ಕಸ್ತೂರಿ ನಾತವ
ಬಸವಣ್ಣ ನಿನ್ನ ಶಗಣೆಯ ಬಳಿವ ಕೈ
ಎಸಳ ಯಾಲಕ್ಕಿ ಗೊನಿ ನಾತ"

ಎಂಬಂತೆ ಕೃಷಿಗೆ ಶಗಣಿ ಮೂಲ ಎನ್ನುವಂತೆ ಶಗಣಿ ಮತ್ತು ಗಂಜಲ ಇವುಗಳಿಂದ ಸ್ವತಃ ಜೀವಾಮೃತ, ಘನಜೀವಾಮೃತ ಮತ್ತು ಎರೆಹುಳು ಗೊಬ್ಬರ ತಯಾರಿಸುತ್ತಾರೆ. ಇದರಿಂದ ಇವರು ತಮ್ಮ ಸಾವಯವ ಕೃಷಿಯಲ್ಲಿ ರಸಗೊಬ್ಬರಗಳ ಖರ್ಚು ಕಡಿಮೆ ಮಾಡಿಕೊಳ್ಳುವುದರ ಜೊತೆಗೆ ಕೀಟ ಮತ್ತು ರೋಗ ಮುಕ್ತ ಬೆಳೆ ಮತ್ತು ಒಳ್ಳೆಯ ಗುಣಮಟ್ಟದ ಇಳುವರಿ ಪಡೆಯುತ್ತಿದ್ದಾರೆ.

"ಮನಸ್ಸಿದ್ದರೆ ಮಾರ್ಗ" ಎಂಬ ಮಾತನ್ನು ಅಕ್ಷರಶಃ ಜೀವನದಲ್ಲಿ ಅಳವಡಿಸಿಕೊಂಡು ಹೊಸತನ್ನು ತಿಳಿದುಕೊಳ್ಳುವ ತುಡಿತ ಸತತ ಪರಿಶ್ರಮದ ಕಾಯಕ ಹಾಗೂ ಪ್ರಗತಿ ಪರ ರೈತರೊಡನೆ ನಿಕಟ ಸಂಪರ್ಕ ಇದೇ ತಮ್ಮ ಯಶಸ್ಸಿನ ಗುಟ್ಟು ಎನ್ನುತ್ತಾರೆ ಸಂತೋಷ ಪಾಗದರವರು. ಇವರು ಕೃಷಿ ವಿಶ್ವವಿದ್ಯಾಲಯ ಹಾಗೂ ಕೃಷಿ ಇಲಾಖೆಗಳಿಂದ ಕಾಲಕಾಲಕ್ಕೆ ದೊರೆಯುವ ತಾಂತ್ರಿಕ ಮಾಹಿತಿಗಳು ಮತ್ತು ಸೌಲಭ್ಯಗಳನ್ನು ಸ್ಮರಿಸುವದನ್ನು ಮರೆಯುವದಿಲ್ಲ.

ಆಧುನಿಕ ಕೃಷಿಯಲ್ಲಿ ಏರುತ್ತಿರುವ ಬೇಸಾಯ ವೆಚ್ಚ, ಹವಾಮಾನ ವೈಪರೀತ್ಯ ಹಾಗೂ ಮಾರುಕಟ್ಟೆಯ ಅನಿಶ್ಚಿತತೆಗಳ ಪರಿಣಾಮದಿಂದಾಗಿ ಇಂದಿನ ಯುವ ಜನಾಂಗ ಕೃಷಿಯಿಂದ ವಿಮುಖರಾಗುತ್ತಿರುವ ಸಂದರ್ಭದಲ್ಲಿ ಶ್ರೀ ಸಂತೋಷ ಪಾಗದರವರ ಸಾಧನೆಯು ಇತರೆ ರೈತರಿಗೆ ಹಾಗೂ ಯುವ ಕೃಷಿಕರಿಗೆ ಮಾದರಿಯಾಗಿದೆ.

## ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರಕ್ಕೆ ಸಂಪರ್ಕಿಸಿರಿ :


**ಕೃಷಿ ವಿಸ್ತರಣೆ ನೆರವು**

**ಫಕ್ಕೀರಗೌಡ ಪಾಟೀಲ**
ಸಹಾಯಕ ತಾಂತ್ರಿಕ ವ್ಯವಸ್ಥಾಪಕರು
ಆತ್ಮ ಯೋಜನೆ, ಹೊಳೆಆಲೂರು

**ಮಂಜುನಾಥ ಜೀಹೆಗಿ**
ತಾಲೂಕು ತಾಂತ್ರಿಕ ವ್ಯವಸ್ಥಾಪಕರು
ಆತ್ಮ ಯೋಜನೆ, ರೋಣ ತಾಲೂಕು

**ನಿಶಾಂತ ಬಂಕಾಪೂರ**
ಉಪ ಯೋಜನಾ ನಿರ್ದೇಶಕರು
ಆತ್ಮ ಯೋಜನೆ, ಗದಗ

**ಸಿದ್ದೇಶ ಕೋಡದಳ್ಳಿ**
ಸಹಾಯಕ ಕೃಷಿ ನಿರ್ದೇಶಕರು
ರೋಣ

**ತಾಂತ್ರಿಕ ಮಾರ್ಗದರ್ಶನ**

**ಶ್ರೀನಿವಾಸ ಚಿಂತಾಲ್ ಛಿ.**
ಉಪ ಕೃಷಿ ನಿರ್ದೇಶಕರು-2
ರೋಣ

**ಸಹದೇವ ಯರಗೊಪ್ಪ**
ಉಪ ಕೃಷಿ ನಿರ್ದೇಶಕರು-1,
ಹಾಗೂ ಯೋಜನಾ ನಿರ್ದೇಶಕರು
ಆತ್ಮ ಯೋಜನೆ, ಗದಗ

**ಸಿ. ಬಿ. ಬಾಲರಡ್ಡಿ**
ಜಂಟಿ ಕೃಷಿ ನಿರ್ದೇಶಕರು,
ಜಿಲ್ಲಾ ಆತ್ಮ ಚಾಲನಾ ಸಮಿತಿ
ಸದಸ್ಯ ಕಾರ್ಯದರ್ಶಿ, ಗದಗ


ಪ್ರಕಟಣೆ : ಆತ್ಮ ಯೋಜನೆ, ಗದಗ

ಕೃಷಿ ಇಲಾಖೆ ಗದಗ

ಜಿಲ್ಲಾ ಪಂಚಾಯತ ಗದಗ

# "ಕೃಷಿ ಪದವಿಧರನ ಸ್ವಾವಲಂಬಿ ಕೃಷಿ"

ಯಶೋಗಾಥೆ...









**ಸಹಾಯಕ ಕೃಷಿ ನಿರ್ದೇಶಕರು, ರೋಣ**

# "ಕೃಷಿ ಪದವಿಧರನ ಸ್ವಾವಲಂಬಿ ಕೃಷಿ"

ಯಶೋಗಾಥೆ...

ವಿದ್ಯೆ ಕಲಿತ ಮೇಲೆ ನೌಕರಿ ಮಾಡಲೇಬೇಕೆಂಬ ನಿಯಮವೇನೂ ಇಲ್ಲಲ್ಲ, ಕಲಿತ ವಿದ್ಯೆಯನ್ನು ಕೃಷಿ ಕಾಯಕದಲ್ಲಿ ಬಳಸಬಹುದಲ್ಲಾ? ಸಾಮಾನ್ಯವಾಗಿ ಕೃಷಿ ಪದವಿ ಮಾಡಿದವರು ರೈತ ಸಮುದಾಯಕ್ಕೆ ಖಾಸಗಿ ಅಥವಾ ಸರಕಾರಿ ಸಂಸ್ಥೆ ಮುಖೇನ ಸಲಹೆಗಾರರಾಗಿರುತ್ತಾರೆ. ಅದು ತಪ್ಪು ಎಂದಲ್ಲ ಆದರೆ ಇಲ್ಲೊಬ್ಬರು ಕೃಷಿ ಪದವಿ ಪಡೆದನಂತರ ತಮ್ಮ ಕೃಷಿ ಜೀವನಕ್ಕೆ ತಾವೇ ಸಲಹೆಗಾರರು ಮತ್ತು ತಮ್ಮ ಕೃಷಿ ಜಮೀನಿನಲ್ಲಿ ವಿವಿಧ ಪ್ರಯೋಗಗಳನ್ನು ಮಾಡುತ್ತಾ, ಸಾವಯವ ಕೃಷಿಯಲ್ಲಿ ತೊಡಗಿ ಯಶಸ್ಸನ್ನು ಗಳಿಸಿರುತ್ತಾರೆ.

ಮಣ್ಣನ್ನು ನಂಬಿ ನಾ ಮಣ್ಣಿಂದ ಬದುಕೀನ  
ಮಣ್ಣಿನ ಮುಂದೆ ಹೊನ್ನ ಕಳಸ ಅಣ್ಣಯ್ಯ  
ಮಣ್ಣೆ ಲೋಕದೊಳು ಬೆಲೆಯುಳ್ಳದ್ದು ಅಣ್ಣಯ್ಯ

ಎಂಬ ಗಾದೆಯ ಮಾತಿನಂತೆ ಬದುಕನ್ನೇ ಬೇಸಾಯ ಮಾಡಿಕೊಂಡು ಬದುಕಿನ ಬಂಡಿಯನ್ನು ಸಾಗುಸುತ್ತಿರುವ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಕೊತಬಾಳ ಗ್ರಾಮದ ಶ್ರೀ ಸಂತೋಷ ಪಾಗದ ಇವರು ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಕೃಷಿ ಪಡೆದು ಎಲ್ಲಿಯೂ ಕೆಲಸಕ್ಕಾಗಿ ಅಲೆಯದೇ ತಮ್ಮ ಊರಿಗೆ ತೆರಳಿ ಕೃಷಿ ಕಾಯಕದಲ್ಲಿ ತಲ್ಲಿನರಾದರು. ಕೃಷಿ ಪದವಿಯಲ್ಲಿ ಗಳಿಸಿದ ಜ್ಞಾನವನ್ನು ಪ್ರಾಯೋಗಿಕವಾಗಿ ಸ್ವಂತ ಜಮೀನಿನಲ್ಲಿ ಅಳವಡಿಸಿ ಏನನ್ನಾದರೂ ಸಾಧಿಸಬೇಕೆಂಬ ಅಚಲವಾದ ನಿರ್ಧಾರವನ್ನು ಮಾಡಿದರು. ಕಲಿತ ವಿದ್ಯೆ ಮತ್ತು ಆಯ್ದುಕೊಂಡ ಗುರಿ ಇಂದು ಒಳ್ಳೆಯ ಲಾಭವನ್ನೇ ತಂದು ಕೊಟ್ಟಿದೆ. ಪ್ರಯೋಗಶೀಲ ಭಾವನೆಯುಳ್ಳ ಇವರು ಪರರಂತೆ ಆಧುನಿಕತೆಗೆ ಜೋತು ಬೀಳದೆ ರಾಸಾಯನಿಕ ಕೃಷಿಯತ್ತ ವಾಲದೇ ಸಾವಯವ ಕೃಷಿ ವಿಧಾನದಲ್ಲಿ ಉತ್ತಮ ಗುಣಮಟ್ಟದ ಫಸಲು ಪಡೆದು ಇತರರಿಗೆ ಮಾದರಿಯಾಗಿದ್ದಾರೆ. ಆರಂಭದಲ್ಲಿ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಬಳಸುತ್ತಿದ್ದ ಇವರು ಕೃಷಿ ಪದವಿಧರನಾಗಿ ನಾನೇ ಯಥೇಚ್ಛವಾಗಿ ರಾಸಾಯನಿಕ ಕೃಷಿ ಪರಿಕರಗಳನ್ನು ಬಳಸಿದರೆ ನಿಸರ್ಗ ಮತ್ತು ಜನರ ಆರೋಗ್ಯದ ಪಾಡೇನು? ಎಂದು ತಾವೇ ಸ್ವಇಚ್ಛೆಯಿಂದ ನಿಧಾನವಾಗಿ ಸಾವಯವದತ್ತ ವಾಲಿದರು. ಈ ಮೂಲಕ ಬೇರೊಬ್ಬರ ಮೇಲಿನ ಅವಲಂಬನೆ ಕಡಿಮೆಮಾಡಿಕೊಂಡರು. ಬೀಜೋಪಚಾರದಿಂದ ಹಿಡಿದು ಬೆಳೆ ಕಟಾವುವರೆಗೆ ಇವರು ಕೈಗೊಂಡ "ಸ್ವಯಂ ಪ್ರಯೋಗಗಳು" ಕೈಹಿಡಿದಿವೆ. ಇವರ ಸಾಧನೆಯನ್ನು ಗುರುತಿಸಿ ಕೃಷಿ ವಿಶ್ವವಿದ್ಯಾಲಯ ಧಾರವಾಡ ಇವರು ಕೃಷಿ ಮೇಳ 2017 ರಲ್ಲಿ "ತಾಲೂಕ ಮಟ್ಟದ ಶ್ರೇಷ್ಠ ಯುವ ಕೃಷಿಕ" ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.

**ಬದಲಾವಣೆ ಕೈ ಹಿಡಿಯಿತು:** ಗೋವಿನ ಜೋಳ, ಹೆಸರು ಬೆಳೆಯುತ್ತಿದ್ದ ಜಮೀನಿನಲ್ಲಿ ಹೆಚ್ಚು ಆದಾಯ ಬರದೇ ಇರುವದನ್ನು ಅವರು ಮನಗೊಂಡು ಏನಾದರು ಬದಲಾವಣೆ ಮಾಡಬೇಕೆಂಬ ಆಲೋಚನೆಯಲ್ಲಿದ್ದಾಗ ಹೊಳೆದದ್ದು "ತಾಳೆ ಬೆಳೆ ಬೇಸಾಯ" ಆ ಸಮಯದಲ್ಲಿ ತಡಮಾಡದೇ 3 ಎಕರೆ ಜಮೀನಿನಲ್ಲಿ ಅದಕ್ಕೆ ಬೇಕಾದ ತಂತ್ರಜ್ಞಾನವನ್ನು ಜಮೀನಿನಲ್ಲಿ ಅಳವಡಿಸಿಕೊಂಡು ಸಸಿಗಳನ್ನು ನಾಟಿಮಾಡಿದರು. ಇನ್ನುಳಿದ 2 ಎಕರೆ ಜಮೀನಿನಲ್ಲಿ 120 ಪಪ್ಪಾಯ ಸಸಿಗಳನ್ನು ನಾಟಿಮಾಡಿದರು. ಇದಕ್ಕೆ ಒಟ್ಟು 50 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದು, ಇದರಿಂದ 18 ಟನ್ ಇಳುವರಿ ಪಡೆದಿದ್ದು, ಎಲ್ಲ ಖರ್ಚು ತೆಗೆದು ನಿವ್ವಳ 2,00,000–00 ರೂ ಲಾಭ ಪಡೆದಿದ್ದಾರೆ. ಹಾಗೆಯೇ ಆ್ಯಪಲ್ ಬಾರಿಯ 450 ಸಸಿಗಳನ್ನು ನಾಟಿಮಾಡಿದ್ದಾರೆ. ಇದರಿಂದ ವಾರ್ಷಿಕ 2 ಲಕ್ಷ ರೂ. ಆದಾಯ ಬರುವ ನಿರೀಕ್ಷೆಯಲ್ಲಿದ್ದಾರೆ. ಇದರೊಂದಿಗೆ ತೋಟದ ಸುತ್ತ 50 ತೆಂಗಿನ ಗಿಡ, 30 ಸಾಗುವಾನಿ ಗಿಡ, ಮಾವು, ಚಿಕ್ಕು, ಸೀತಾಫಲ, ಅಂಜೂರ, ಬೆಟ್ಟದನೆಲ್ಲಿ, ಕರಿಬೇವುಗಳನ್ನು ಬೆಳೆದಿದ್ದಾರೆ. ಇವುಗಳ ಮಧ್ಯ ಹಾಗೂ ಬದುವಿನ ಸುತ್ತ ಮೇವಿನ ಹುಲ್ಲನ್ನು ಬೆಳೆಯುತ್ತಿದ್ದಾರೆ. ಹೈನುಗಾರಿಕೆಗಾಗಿ ಎರಡು ಆಕಳುಗಳಿಗೆ ತಾವು ಬೆಳೆದಂತಹ ಮೇವನ್ನು ಬಳಸುತ್ತಿದ್ದು, ಅಕ್ಕ ಪಕ್ಕದ ರೈತರಿಗಿಂತ ಹೆಚ್ಚಿನ ಪ್ರಮಾಣದ ಹಾಲನ್ನು ಪಡೆಯುತ್ತಿದ್ದಾರೆ.

**ಗೊಬ್ಬರ ಮತ್ತು ನೀರಿನ ನಿರ್ವಹಣೆ :** ಜಮೀನಿನಲ್ಲಿ ಬಿದ್ದಿರುವ ಒಣಕಸ, ತೆಂಗಿನಗರಿ, ಕೊಟ್ಟಿಗೆ ಗೊಬ್ಬರ, ಕೃಷಿ ತ್ಯಾಜ್ಯ ಉಪಯೋಗಿಸಿ ಸಾವಯವ ಗೊಬ್ಬರ ತಯಾರಿಸುತ್ತಿದ್ದಾರೆ. ಅಲ್ಲದೆ, ಬಯೋಡೈಜೆಸ್ಟರ್ ತೊಟ್ಟಿಗೆ ತೋಟದಲ್ಲಿದ್ದ ಪಪ್ಪಾಯ ಎಲೆಗಳು, ಹಸಿ ಕಸ, ಬೇವಿನ ಬೀಜದ ಎಲೆಗಳನ್ನು ಹಾಕಿ ನೀರು ಮತ್ತು ಗಂಜಲವನ್ನು ಸೇರಿಸಿ, 15 ದಿನಗಳ ನಂತರ ಜೀವಸಾರ ಘಟಕದಲ್ಲಿ ಮಿಶ್ರಣಗೊಂಡ ನೀರನ್ನು ಸೋಸಿ, ಹನಿ ನೀರಾವರಿ ಮೂಲಕ ಪಪ್ಪಾಯ, ಆ್ಯಪಲ್ ಬಾರೆ, ತಾಳೆ ಗಿಡಕ್ಕೆ ಒದಗಿಸುತ್ತಾರೆ. ಇದರಿಂದ ಗಿಡಗಳಿಗೆ ಯಾವುದೇ ರೋಗ ಭಾದೆ ತಗಲುವುದಿಲ್ಲ ಎನ್ನುವುದು ಸಂತೋಷ ಅವರ ಅನುಭವದ ಮಾತು. ಇವರ ಜಮೀನಿನಲ್ಲಿ 2 ಇಂಚು ನೀರು ಹೊಂದಿರುವ ಒಂದು ಕೊಳವೆ ಬಾವಿ ಇದ್ದು, ಇದರ ಪಕ್ಕದಲ್ಲಿ ಕೃಷಿ ಭಾಗ್ಯ ಯೋಜನೆಯಡಿ 12ಮೀ×12ಮೀ×3ಮೀ ಆಳತೆಯ ಒಂದು ಕೃಷಿ ಹೊಂಡವನ್ನು ನಿರ್ಮಿಸಿಕೊಂಡಿದ್ದಾರೆ. ಮಳೆಗಾಲ ಸಮಯದಲ್ಲಿ ಕೃಷಿ ಹೊಂಡದಲ್ಲಿ ನೀರು ಸಂಗ್ರಹವಾದಾಗ ಕೊಳವೆ ಬಾವಿಯಲ್ಲಿ ಅಂತರ್ಜಲದ ಮಟ್ಟ ಹೆಚ್ಚುತ್ತದೆ. ಮಳೆ ಎರಡರಿಂದ ಮೂರು ತಿಂಗಳ ಕಾಲ ಬಾರದೇ ಇರುವ ಸಮಯದಲ್ಲಿ ಬೋರವೆಲ್ ಮೂಲಕ ಕೃಷಿ ಹೊಂಡಕ್ಕೆ ನೀರು ಸಂಗ್ರಹಿಸಿ, ಹನಿ ಮತ್ತು ತುಂತುರು ನೀರಾವರಿ ಪದ್ಧತಿಗಳನ್ನು ಅನುಸರಿಸುತ್ತಿದ್ದಾರೆ. ಈ ರೀತಿ ನೀರಾವರಿ ಮಾಡುವುದರಿಂದ ಜೀವ ಜಲವನ್ನು ಸಂರಕ್ಷಿಸುವುದರ ಜೊತೆಗೆ ವಿದ್ಯುತ್ ಹಾಗೂ ಕೂಲಿಕಾರರ ವೆಚ್ಚವನ್ನು ಮಿತಗೊಳಿಸಲು ಸಹಕಾರಿಯಾಗುತ್ತಿದೆ ಎಂಬುವುದು ಶ್ರೀ ಸಂತೋಷರವರ ಅನುಭವದ ಮಾತು. ಜೊತೆಗೆ ಬೇವಿನ ಎಲೆ ಮತ್ತು ಬೀಜಗಳಿಂದ ಸಸ್ಯಜನ್ಯ ಕೀಟನಾಶಕಗಳನ್ನು ಸ್ವತಃ ಇವರೇ ತಯಾರು ಮಾಡಿಕೊಂಡು ಬೆಳೆಗಳಿಗೆ ಅವಶ್ಯವಿದ್ದಾಗ ಸಿಂಪಡಿಸುತ್ತಾರೆ. ಅಲ್ಲದೇ ನೀರಿನಲ್ಲಿ ಗೋಮೂತ್ರ ಬೆರೆಸಿ ಬೆಳೆಗಳಿಗೆ ಸಿಂಪಡಿಸುವುದರಿಂದ ಕೀಟಬಾಧೆ ತಡೆಗಟ್ಟುತ್ತೇನೆ ಎನ್ನುತ್ತಾರೆ.

**ಕುದುರೆ ಮೆಂತೆ ಬೇಸಾಯ:** ಶ್ರೀ ಸಂತೋಷ ಪಾಗದರವರು 2009 ರಿಂದ ಕುದುರೆ ಮೆಂತೆ ಬೆಳೆಯಲು ಆರಂಭಿಸಿದರು. ಮೊದಲು ತಮ್ಮ ಸ್ವಂತ ದನಗಳ ಮೇವಿನ ಉದ್ದೇಶಕ್ಕಾಗಿ ಮಾತ್ರ ಕುದುರೆ ಮೆಂತೆ ಬೆಳೆಯುತ್ತಿದ್ದರು. ತದನಂತರದಲ್ಲಿ ಕರಾವಳಿ ಪ್ರದೇಶದ ಪಶು ಸಂಗೋಪನೆ ಘಟಕಗಳಿಂದ ಕುದುರೆ ಮೆಂತೆಗೆ ಸಾಕಷ್ಟು ಬೇಡಿಕೆಯಿರುವುದನ್ನು ತಿಳಿದು ಅಂದಿನಿಂದ ಇಂದಿನವರೆಗೂ ಕುದುರೆ ಮೆಂತೆ ಹೊಟ್ಟು ಪೂರೈಸುತ್ತಿದ್ದಾರೆ. ಇದಕ್ಕಾಗಿ ಹೈದ್ರಾಬಾದ್, ಬೆಂಗಳೂರು, ಅಹ್ಮದನಗರದ ಕೆಲವು ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ವಿವಿಧ ಸಂಸ್ಥೆಯವರೊಡನೆ ಉತ್ಪಾದನಾ ಸಾಮರ್ಥ್ಯವನ್ನು ಒಡಂಬಡಿಕೆ ಮಾಡಿಕೊಂಡು ಅವಶ್ಯಕ್ಕನುಗುಣವಾಗಿ ಕುದುರೆ ಮೆಂತೆ ಹೊಟ್ಟನ್ನು ಪ್ರತಿ ಕಿಲೋಗೆ 18 ರಿಂದ 20 ರೂಪಾಯಿಗೆ ಪೂರೈಸುತ್ತಿದ್ದಾರೆ. ಆರಂಭದಲ್ಲಿ 2 ಎಕರೆಯಲ್ಲಿ ಕುದುರೆ ಮೆಂತೆ ಬೇಸಾಯ ಆರಂಭಿಸಿದ್ದರು. ಸಧ್ಯ 20 ಎಕರೆ ಪ್ರದೇಶದಲ್ಲಿ ಕುದುರೆ ಮೆಂತೆ ಬೆಳೆಯುತ್ತಿದ್ದಾರೆ. ಪ್ರತಿ ವರ್ಷ ಸರಾಸರಿ 2 ರಿಂದ 3 ಎಕರೆ ಪ್ರದೇಶವನ್ನು ಹೆಚ್ಚಿಸುತ್ತಾ ಸಾಗಿದ್ದಾರೆ.